ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-3, November-December 2025, Pp. 57-65
©*IIMRD*, Mysuru
www.iimrd.com

# ಬುಡಕಟ್ಟು ಸಮುದಾಯಗಳ ಶಿಕ್ಷಣ, ಉದ್ಯೋಗ, ಮತ್ತು ಸುಸ್ಥಿರ ಅಭಿವೃದ್ಧಿ: ಒಂದು ಅಧ್ಯಯನ

**ಡಾ.ಎಸ್.ರವಿಕುಮಾರ[1] ಮತ್ತು ಡಾ.ಮಂಜುನಾಥ ಬಿ.ಆರ್[2]**
[1]ಸಂಶೋಧನಾ ಸಹಾಯಕರು, [2]ರೀಸರ್ಚ್ ಇನ್ವೆಸ್ಟಿಗೇಟರ್
ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ, ಮೈಸೂರು.

**ಸಾರಾಂಶ: (Abstract)**

*ಪ್ರಸ್ತುತ ಅಧ್ಯಯನವು ಕರ್ನಾಟಕದ ಮೈಸೂರು ಜಿಲ್ಲೆಯ ಬುಡಕಟ್ಟು ಸಮುದಾಯಗಳ ಶಿಕ್ಷಣ, ಉದ್ಯೋಗ ಮತ್ತು ಸುಸ್ಥಿರ ಅಭಿವೃದ್ಧಿಯ ನಡುವಿನ ಅಂತರ್ ಸಂಬಂಧವನ್ನು ಕುರಿತು ಅಧ್ಯಯನ ಮಾಡುತ್ತದೆ. ಪ್ರಸ್ತುತ ಅಧ್ಯಯಕ್ಕೆ ಕುಟುಂಬ ಸಮೀಕ್ಷೆ, ಸಂದರ್ಶನ ಮತ್ತು ಅವಲೋಕನ ವಿಧಾನಗಳನ್ನು ಪ್ರಮುಖವಾಗಿ ಬಳಸಿಕೊಳ್ಳಲಾಗಿದೆ. ಈ ಸಂಶೋಧನೆಯು ಬುಡಕಟ್ಟು ಜನರ ಶೈಕ್ಷಣಿಕ ಮತ್ತು ಉದ್ಯೋಗ ಸಿ ಮತ್ತು ಸುಸ್ಥಿರ ಅಭಿವೃದ್ಧಿ ಉಪಕ್ರಮಗಳನ್ನು ವಿಶ್ಲೇಷಿಸುವ ಗುರಿಯನ್ನು ಹೊಂದಿದೆ. ಈ ಸಮಗ್ರ ಅಧ್ಯಯನದ ಮೂಲಕ ಬುಡಕಟ್ಟು ಜನಸಂಖ್ಯೆಯ ಸಾಮಾಜಿಕ-ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸಲಹೆಗಳನ್ನು ನೀಡುತ್ತದೆ. ಇದರಿಂದಾಗಿ ಮೈಸೂರು ಜಿಲ್ಲೆಯ ಬುಡಕಟ್ಟು ಸಮುದಾಯಗಳ ಸಬಲೀಕರಣಕ್ಕೆ ಅನುಕೂಲವಾಗುತ್ತದೆ.*

**ಮುಖ್ಯಪದಗಳು (Keywords):** *ಬುಡಕಟ್ಟು ಸಮುದಾಯಗಳು, ಶಿಕ್ಷಣ, ಉದ್ಯೋಗ, ಸುಸ್ಥಿರ ಅಭಿವೃದ್ಧಿ, ಮೈಸೂರು ಜಿಲ್ಲೆ, ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳು.*

## ಪೀಠಿಕೆ

ಕರ್ನಾಟಕದ ದಕ್ಷಿಣ ಭಾಗದಲ್ಲಿರುವ ಮೈಸೂರು ಜಿಲ್ಲೆಯು ತನ್ನದೇ ಆದ ಐತಿಹಾಸಿಕ, ಭೌಗೋಳಿಕ ಮತ್ತು ಸಾಂಸ್ಕೃತಿಕ ಪರಂಪರೆಯ ವೈವಿಧ್ಯತೆಯನ್ನು ಹೊಂದಿರುವ ಪ್ರಮುಖ ಜಿಲ್ಲೆಯಾಗಿದೆ. ಈ ಜಿಲ್ಲೆಯು ಒಟ್ಟು 8 ತಾಲೂಕುಗಳನ್ನು ಹೊಂದಿದ್ದು, ಮೈಸೂರು ನಗರವು ಜಿಲ್ಲಾ ಕೇಂದ್ರವಾಗಿದೆ. ಮೈಸೂರು ಜಿಲ್ಲೆ ದಕ್ಷಿಣಕ್ಕೆ ಚಾಮರಾಜನಗರ ಜಿಲ್ಲೆಯೊಂದಿಗೆ ಪಶ್ಚಿಮಕ್ಕೆ ಕೊಡಗು ಜಿಲ್ಲೆ, ಪೂರ್ವಕ್ಕೆ ಮಂಡ್ಯ ಜಿಲ್ಲೆ ಇದೆ. ಮೈಸೂರು ಜಿಲ್ಲೆ ಸುಮಾರು 6854 ಚದರ ಕಿಲೋಮೀಟರ್ ಪ್ರದೇಶವನ್ನು ಹೊಂದಿದೆ. ಇದು 788 ಮೀಟರ್ ನಿಂದ 660 ಮೀಟರ್ ಎತ್ತರದ ವ್ಯಾಪ್ತಿಯಲ್ಲಿದೆ. ಈ ಜಿಲ್ಲೆ ದಕ್ಷಿಣ ಭಾರತಕ್ಕೆ ಸೇರಿದೆ. ಜಿಲ್ಲೆಯಲ್ಲಿ ಪ್ರಮುಖವಾಗಿ ಎಚ್.ಡಿ.ಕೋಟೆ, ಪಿರಿಯಾಪಟ್ಟಣ, ಹುಣಸೂರು ಹಾಗೂ ನಂಜನಗೂಡು ತಾಲೂಕುಗಳಲ್ಲಿ ಜೇನುಕುರುಬ, ಬೆಟ್ಟಕುರುಬ, ಸೋಲಿಗ, ಹಕ್ಕಿಪಿಕ್ಕಿ, ಎರವ, ಮುಂತಾದ ಬುಡಕಟ್ಟು ಸಮುದಾಯಗಳು ನೆಲೆಸಿವೆ.

*Please cite this article as:* ರವಿಕುಮಾರ, ಎಸ್ ಮತ್ತು ಮಂಜುನಾಥ ಬಿ.ಆರ್. (2025). ಬುಡಕಟ್ಟು ಸಮುದಾಯಗಳ ಶಿಕ್ಷಣ, ಉದ್ಯೋಗ, ಮತ್ತು ಸುಸ್ಥಿರ ಅಭಿವೃದ್ಧಿ: ಒಂದು ಅಧ್ಯಯನ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(3). ಪು.ಸಂ. 57–65*

**ಬುಡಕಟ್ಟು ಸುಸ್ಥಿರ ಅಭಿವೃದ್ಧಿ**

ಬುಡಕಟ್ಟು ಸಮುದಾಯಗಳ ಸುಸ್ಥಿರ ಅಭಿವೃದ್ಧಿಯು ಸಂಕೀರ್ಣ ಮತ್ತು ಬಹುಮುಖಿ ಪರಿಕಲ್ಪನೆಯಾಗಿದ್ದು ಅದು ಸಾಮಾಜಿಕ, ಆರ್ಥಿಕ ಮತ್ತು ಪರಿಸರಗಳ ನಡುವಿನ ಪರಸ್ಪರ ಸಂಬಂಧವನ್ನು ಪರಿಗಣನೆಗೆ ತೆಗೆದುಕೊಳ್ಳುತ್ತದೆ. ಸುಸ್ಥಿರ ಅಭಿವೃದ್ಧಿಯು ಬುಡಕಟ್ಟು ಸಮುದಾಯ ಮತ್ತು ನಿಸರ್ಗದ ನಡುವಿನ ಸಾಮರಸ್ಯದ ಸಂಬಂಧವನ್ನು ಒತ್ತಿಹೇಳುತ್ತದೆ, ಸಾಂಸ್ಕೃತಿಕ ವೈವಿಧ್ಯತೆಯನ್ನು ಗೌರವಿಸುವ ಮತ್ತು ಸಾಮಾಜಿಕ ನ್ಯಾಯವನ್ನು ಉತ್ತೇಜಿಸುವ ಸಮತೋಲಿತ ಮತ್ತು ನಿರಂತರ ಪ್ರಗತಿಯು ಬುಡಕಟ್ಟು ಸುಸ್ಥಿರ ಅಭಿವೃದ್ಧಿಯ ಪ್ರಮುಖ ಗುರಿಯಾಗಿರುತ್ತದೆ.

ಬುಡಕಟ್ಟುಗಳ ಸುಸ್ಥಿರ ಅಭಿವೃದ್ಧಿಯು ಬುಡಕಟ್ಟು ಸಮುದಾಯಗಳ ಸಮಗ್ರ ಅಭಿವೃದ್ಧಿಯನ್ನು ಸಾಧಿಸುವುದಾಗಿದೆ. ಪ್ರಸ್ತುತ ಪೀಳಿಗೆಯ ಅಗತ್ಯಗಳನ್ನು ಪೂರೈಸುವುದರ ಜೊತೆಗೆ ಭವಿಷ್ಯದ ಪೀಳಿಗೆಗಳು ತಮ್ಮ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯವನ್ನು ಸಮತೋಲನಗೊಳಿಸುವುದನ್ನು ಸುಸ್ಥಿರ ಅಭಿವೃದ್ಧಿಯು ಒಳಗೊಂಡಿರುತ್ತದೆ.

ಬುಡಕಟ್ಟು ಸಮುದಾಯಗಳ ಸುಸ್ಥಿರ ಅಭಿವೃದ್ದಿಯು ಬುಡಕಟ್ಟು ಸಂಸ್ಕೃತಿ ಸಂರಕ್ಷಣೆ, ಸ್ಥಳೀಯ ಜ್ಞಾನ, ಭಾಷೆ ಮತ್ತು ಪದ್ಧತಿಗಳನ್ನು ಗುರುತಿಸುವುದು, ನೈಸರ್ಗಿಕ ಸಂಪನ್ಮೂಲಗಳ ಸುಸ್ಥಿರ ಬಳಕೆ, ಸಾಂಸ್ಕೃತಿಕ ಸಮಗ್ರತೆಗೆ ಧಕ್ಕೆಯಾಗದಂತೆ ಅವರ ಆರ್ಥಿಕ ಅಭಿವೃದ್ಧಿ ಯೋಜನೆ, ಸಾಮಾಜಿಕ ನ್ಯಾಯ, ಆರೋಗ್ಯ, ಶಿಕ್ಷಣ, ಉದ್ಯೋಗ ಮತ್ತು ಮೂಲಭೂತ ಮೂಲಸೌಕರ್ಯ ಮುಂತಾದವುಗಳನ್ನು ಒಳಗೊಂಡಿರುತ್ತದೆ. ಪ್ರಸ್ತುತ ಲೇಖನದಲ್ಲಿ ಬುಡಕಟ್ಟು ಜನರ ಸುಸ್ಥಿರ ಅಭಿವೃದ್ಧಿಯಲ್ಲಿ ಶಿಕ್ಷಣ ಮತ್ತು ಉದ್ಯೋಗ ಪಾತ್ರವನ್ನು ಅವಲೋಕಿಸುವ ಪ್ರಯತ್ನ ಮಾಡಲಾಗಿದೆ.

**ಬುಡಕಟ್ಟು ಸಮುದಾಯಗಳ ಹಿನ್ನಲೆ**

ಬುಡಕಟ್ಟು ಸಮುದಾಯಗಳನ್ನು ತಮ್ಮದೇ ಆದ ಆಚಾರ, ವಿಚಾರ, ಸಂಸ್ಕೃತಿ, ಸಾಮಾಜಿಕ, ಧಾರ್ಮಿಕ ಪದ್ಧತಿಗಳನ್ನು ಒಳಗೊಂಡಿದೆ. ಕೆಲವು ಬುಡಕಟ್ಟು ಸಮುದಾಯಗಳ ಆಚರಣೆಗಳಲ್ಲಿ ಸಾಮ್ಯತೆ ಕಂಡುಬಂದರೆ ಕೆಲವು ಸಮುದಾಯಗಳ ಜೀವನ ವಿಧಾನದಲ್ಲಿ ಭಿನ್ನತೆಯನ್ನು ಕಾಣಬಹುದಾಗಿದೆ. ಈ ಸಮುದಾಯಗಳ ಅಭಿವೃದ್ಧಿಗಾಗಿ ಸರ್ಕಾರ ವಿವಿಧ ಯೋಜನೆಗಳನ್ನು ರೂಪಿಸಿ ಕಾಡಿನಿಂದ ಹೊರಗೆ ತಂದ ನಂತರ ಪುನರ್ವಸತಿಗೊಂಡ ಹಾಗೂ ಮೂಲ ಸ್ಥಳಗಳಲ್ಲಿ ವಾಸಿಸುತ್ತಿರುವ ಎರಡೂ ಸಮುದಾಯಗಳೂ ಕೂಡ ಅನಕ್ಷರತೆ, ಹಸಿವು, ಬಡತನ, ನಿರುದ್ಯೋಗ, ಅನಾರೋಗ್ಯ ಮುಂತಾದ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇತರೆ ಸಮುದಾಯಗಳಿಗೆ ಹೋಲಿಸಿದಾಗ ಬುಡಕಟ್ಟು ಸಮುದಾಯಗಳಲ್ಲಿ ಶೈಕ್ಷಣಿಕ ಮಟ್ಟ ಹಾಗೂ ಉದ್ಯೋಗದ ಮಟ್ಟು ಅತ್ಯಂತ ಕೆಳಮಟ್ಟದಲ್ಲಿದೆ. ಅದರಲ್ಲಿಯೂ ಜೇನುಕುರುಬ ಸಮುದಾಯದವರ ಸ್ಥಿತಿಗತಿ ತುಂಬಾ ಹಿಂದುಳಿದಿದೆ. ಈ ಹಿನ್ನಲೆಯಲ್ಲಿ ಪ್ರಸ್ತುತ ಅಧ್ಯಯನಕ್ಕೆ ಜೇನುಕುರುಬ, ಬೆಟ್ಟಕುರುಬ ಮತ್ತು ಎರವ ಬುಡಕಟ್ಟು ಸಮುದಾಯವನ್ನು ಆಯ್ಕೆ ಮಾಡಿಕೊಂಡು ಆ ಸಮುದಾಯದ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ರಾಜ್ಯದಲ್ಲಿ ಆದಿಯನ್, ಬಿಲ್ಲ, ಗೊಂಡ, ಹಕ್ಕಿಪಿಕ್ಕಿ, ಹಸಲರು, ಸೋಲಿಗ, ಬೆಟ್ಟ ಕುರುಬ, ಜೇನು ಕುರುಬ, ಕೊರಗ, ಮಲೆಕುಡಿಯ, ಇರುಳಿಗ, ಕಣಿಯನ್, ಕೋಳಿಧೋರ್, ಕೊಂಡಕಾಪು, ಪಣಿಯನ್, ಎರವ, ಸಿದ್ದಿ ಮುಂತಾದ 50 ಬುಡಕಟ್ಟು ಪಂಗಡಗಳಿವೆ. ಇವರಲ್ಲಿ ಜೇನುಕುರುಬ ಮತ್ತು ಕೊರಗ ಬುಡಕಟ್ಟು ಸಮುದಾಯವನ್ನು 'ನೈಜ ದುರ್ಬಲ ಬುಡಕಟ್ಟು ಗುಂಪು ಪಟ್ಟಿಗೆ ಸೇರಿಸಲಾಗಿದೆ. 2011 ಜನಗಣತಿ ಪ್ರಕಾರ ರಾಜ್ಯದಲ್ಲಿ 21,34,754 ಪುರುಷರು ಮತ್ತು 21,14,233 ಮಹಿಳೆಯರನ್ನು ಒಳಗೊಂಡಂತೆ ಒಟ್ಟು 42,48,987 (6.8%) ಪರಿಶಿಷ್ಟ ಬುಡಕಟ್ಟು ಸಮುದಾಯದವರು 30 ಜಿಲ್ಲೆಗಳಲ್ಲಿ ಹರಡಿಕೊಂಡಿದ್ದಾರೆ.

ಮೈಸೂರು ಜಿಲ್ಲೆಯಲಿ 1971 ರಿಂದ 1981 ರ ಅವಧಿಯಲ್ಲಿ ಇರುವ ಜನಸಂಖ್ಯೆ ಶೇ.43.22ರ ದರದಲ್ಲಿ ಹೆಚ್ಚಳವಾಗಿದೆ. ಅಂದರೆ ಈ ಅವಧಿಯಲ್ಲಿ 11,913 ರಿಂದ 63,399 ಕ್ಕೇರಿದೆ. ಮುಂದಿನ ಒಂದು ದಶಕದಲ್ಲಿ ಇವರ ಜನಸಂಖ್ಯೆ 1,04,719 ಕ್ಕೇರಿದ್ದರೂ ಕೂಡ ಬೆಳವಣಿಗೆ ದರ ಶೇ. 6.52ಕ್ಕೆ ಕುಸಿದಿದೆ. ಆದರೆ ಮುಂದಿನ ದಶಕದಲ್ಲಿ ಬೆಳವಣಿಗೆ ದರವೃದ್ಧಿಯಾಗಿ ಶೇ.15.91 ಕ್ಕೇರಿತು. 2001–2011ರ ಅವಧಿಯಲ್ಲಿ 3,34,547 ಕ್ಕೇರಿದೆ. ಈದಶಕದಲ್ಲಿ ಬೆಳವಣಿಗೆ ದರ ಶೇ.2.33 ರಷ್ಟಿದ್ದು ಇದು ಸರ್ವಕಾಲಿಕ ಕಡಿಮೆ ಬೆಳವಣಿಗೆ ದರವಾಗಿದೆ.

ತಾಲೂಕುವಾರು ನೋಡಿದಾಗ 1991 ರಲ್ಲಿ ಹುಣಸೂರು(37%), ಮೈಸೂರು (20.8%), ಹೆಚ್.ಡಿ.ಕೋಟೆ (17.9%), ಪಿರಿಯಾಪಟ್ಟಣ (10.2%) ತಾಲ್ಲೂಕುಗಳು ಹೆಚ್ಚು ಬುಡಕಟ್ಟು ಜನಸಂಖ್ಯೆ ಹೊಂದಿದ್ದರೆ. ಕೆ.ಆರ್.ನಗರ (2.3%), ನಂಜನಗೂಡು (3.7%) ಮತ್ತು ಟಿ.ನರಸೀಪುರ (8.1%) ತಾಲ್ಲೂಕುಗಳು ಕಡಿಮೆ ಬುಡಕಟ್ಟು ಜನಸಂಖ್ಯೆಯನ್ನು ಹೊಂದಿದೆ. ಆದರೆ 2011 ನೇ ಜನಗಣತಿಯಲ್ಲಿ ಮೈಸೂರು (28.1%) ಅತ್ಯಂತ್ಯ ಹೆಚ್ಚು ಬುಡಕಟ್ಟು ಸಮುದಾಯವನ್ನು ಹೊಂದಿದ್ದು ನಂತರದ ಸ್ಥಾನದಲ್ಲಿ ಹೆಚ್.ಡಿ.ಕೋಟೆ (18.6%), ನಂಜನಗೂಡು (15.9%), ಹುಣಸೂರು (14.0%), ಟಿ. ನರಸೀಪುರ (12.0%) ರಷ್ಟು ಜನರು ತಾಲೂಕುಗಳು ಕಂಡುಬರುತ್ತದೆ. ಪ್ರತಿಯಾಗಿ ಕೆ.ಆರ್.ನಗರ (5.3%), ಪಿರಿಯಾಪಟ್ಟಣ (6.2%) ಕಡಿಮೆ ಜನಸಂಖ್ಯೆಯನ್ನು ಹೊಂದಿವೆ. ಅಂದರೆ ಬುಡಕಟ್ಟು ಜನರ ಹಂಚಿಕೆ / ಚದುರುವಿಕೆಯಲ್ಲಿ ಕೇವಲ 2 ದಶಕಗಳ ಅಂತರದಲ್ಲಿ ಆಗಾಧ ಪ್ರಮಾಣದ ಬದಲಾವಣೆಯನ್ನು ಕಾಣಬಹುದಾಗಿದೆ.

ಅಭಿವೃದ್ಧಿಯನ್ನು ಅಳೆಯುವಲ್ಲಿ ಸಾಕ್ಷರತಾ ಪ್ರಮಾಣ ತುಂಬಾ ಮುಖ್ಯವಾದುದಾಗಿದೆ. ಜಿಲ್ಲೆಯಲ್ಲಿ ಪರಿಶಿಷ್ಟ ಬುಡಕಟ್ಟು ಜನರ ಸಾಕ್ಷಾರತಾ ದರ 1991ರಲ್ಲಿ 24.96% ರಷ್ಟಿದ್ದರೆ. ಈ ಪ್ರಮಾಣ 2011 ರಲ್ಲಿ 54.09% ರಷ್ಟಿದೆ. ಅಂದರೆ ದಶಕಗಳಲ್ಲಿ ಶೇ.30% ರಷ್ಟು ಸಾಕ್ಷರತಾ ದರ ಅಧಿಕವಾಗಿರುವುದನ್ನು ಕಾಣಬಹುದಾಗಿದೆ.

**ಅಧ್ಯಯನದ ಉದ್ದೇಶಗಳು**

- ಮೈಸೂರು ಜಿಲ್ಲೆ ಬುಡಕಟ್ಟು ಸಮುದಾಯ ಸುಸ್ಥಿರ ಅಭಿವೃದ್ಧಿಯಲ್ಲಿ ಅವರ ಸಾಮಾಜಿಕ, ಆರ್ಥಿಕ (ಉದ್ಯೋಗ) ಮತ್ತು ಶಿಕ್ಷಣದ ಪಾತ್ರವನ್ನು ತಿಳಿಯುವುದು.
- ಮೈಸೂರು ಜಿಲ್ಲೆ ಬುಡಕಟ್ಟು ಸಮುದಾಯದ ಸುಸ್ಥಿರ ಅಭಿವೃದ್ಧಿಗೆ ಸಲಹೆ ನೀಡುವುದು.

**ಸಂಶೋಧನಾ ವಿಧಾನಗಳು**

ಪ್ರಸ್ತುತ ಅಧ್ಯಯನಕ್ಕೆ ಪ್ರಾಥಮಿಕ ಮತ್ತು ಮಾಧ್ಯಮಿಕ ಮೂಲಗಳಿಂದ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಾಥಮಿಕ ಮಾಹಿತಿ ಸಂಗ್ರಹಣೆಗೆ ಅವಲೋಕನ, ಸಂದರ್ಶನ, ಕುಟುಂಬ ಸಮೀಕ್ಷೆ, ಗುಂಪು ಚರ್ಚೆ ಮುಂತಾದ ವಿಧಾನಗಳನ್ನು ಬಳಸಿಕೊಳ್ಳಲಾಗಿದೆ ಹಾಗೂ ಮಾಧ್ಯಮಿಕ ಮಾಹಿತಿಗೆ ವಿವಿಧ ಗ್ರಂಥಗಳು, ಸಂಶೋಧನಾ ಮಹಾಪ್ರಬಂಧಗಳು, ಪ್ರಬಂಧಗಳು, ನಿಯತಕಾಲಿಕೆಗಳು, ಅಂತರ್ಜಾಲ ಮುಂತಾದ ಮೂಲಗಳಿಂದ ಸಂಗ್ರಹಿಸಲಾಗಿದೆ.

**ಮಾದರಿ ವಿಧಾನ**

ಪ್ರಸ್ತುತ ಅಧ್ಯಯನಕ್ಕೆ ಎಚ್.ಡಿ.ಕೋಟೆ ಮತ್ತು ಹುಣಸೂರು ತಾಲೂಕಿನ 60 ಬುಡಕಟ್ಟು ಕುಟುಂಬಗಳನ್ನು ಸರಳ ಯಾಧೃಚ್ಛಿಕ ಮಾದರಿ ವಿಧಾನದಲ್ಲಿ ಆಯ್ಕೆ ಮಾಡಿಕೊಂಡು ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಮಾಹಿತಿ ವಿಶ್ಲೇಷಣೆ**

ಬುಡಕಟ್ಟು ಸಮುದಾಯಗಳಲ್ಲಿ ವಿಭಕ್ತ ಕುಟುಂಬಗಳ ಪ್ರಮಾಣ ಅಧಿಕವಾಗಿವೆ. ಪ್ರಸ್ತುತ ಅಧ್ಯಯನಕ್ಕೆ 60 ಕುಟುಂಬಗಳಿಂದ ಮಾಹಿತಿ ಸಂಗ್ರಹಿಸಲಾಗಿದ್ದು, ಶೇ.67 ರಷ್ಟು ವಿಭಕ್ತ ಕುಟುಂಬಗಳಾಗಿದ್ದು, ಶೇ.33 ರಷ್ಟು ಕುಟುಂಬಗಳು ವಿಭಕ್ತ ಕುಟುಂಬಗಳಾಗಿವೆ.

**ಕೋಷ್ಟಕ 1: ಬುಡಕಟ್ಟುವಾರು ಪ್ರತಿಕ್ರಿಯಾರ್ಥಿಗಳ ಕುಟುಂಬಗಳ ವಿವರ**

| **ಬುಡಕಟ್ಟು** | **ಆವೃತ್ತಿ** | **ಶೇಕಡವಾರು** |
|---|---|---|
| ಜೇನುಕುರುಬ | 24 | 40.0 |
| ಸೋಲಿಗ | 15 | 25.0 |
| ಎರವ | 21 | 35.0 |
| ಒಟ್ಟು | 60 | 100.0 |

ಕೋಷ್ಟಕ 1 ರಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕುಟುಂಬಗಳ ವಿವರವನ್ನು ನೀಡಲಾಗಿದೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಒಟ್ಟು ಕುಟುಂಬಗಳಲ್ಲಿ 24 ಅಂದರೆ ಶೇ.40 ರಷ್ಟು ಕುಟುಂಬಗಳು ಜೇನುಕುರುಬ ಕುಟುಂಬಗಳಾಗಿದ್ದು, 25.0% ಸೋಲಿಗ ಮತ್ತು ಶೇ.35 ಎರವ ಸಮುದಾಯಕ್ಕೆ ಸೇರಿರುವ ಕುಟುಂಬಗಳಾಗಿವೆ. ಹುಣಸೂರು ಮತ್ತು ಎಚ್.ಡಿ ಕೋಟೆ ತಾಲೂಕಿನಲ್ಲಿ ಜೇನುಕುರುಬರ ಪ್ರಮಾಣ ಅಧಿಕವಾಗಿರುವುದ್ದರಿಂದ ಈ ಸಮುದಾಯದ ಕುಟುಂಬಗಳು ಹೆಚ್ಚಿನ ಪ್ರಮಾಣದಲ್ಲಿ ನೆಲೆಸಿವೆ. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಒಟ್ಟು ಕುಟುಂಬಗಳಲ್ಲಿ 248 ಜನಸಂಖ್ಯೆ ಕಂಡು ಬರುತ್ತದೆ. ಕುಟುಂಬದ ಗಾತ್ರ 4.13 ರಷ್ಟಿದೆ.

**ಕೋಷ್ಟಕ 2: ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕುಟುಂಬಗಳ ಮುಖ್ಯಸ್ಥರ ಲಿಂಗವಾರು ವಿವರ**

| ಲಿಂಗ | ಆವೃತ್ತಿ | ಶೇಕಡವಾರು |
|---|---|---|
| ಗಂಡು | 38 | 63.3 |
| ಹೆಣ್ಣು | 22 | 36.7 |
| ಒಟ್ಟು | 60 | 100.0 |

ಕೋಷ್ಟಕ 2 ರಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಕುಟುಂಬಗಳ ಮುಖ್ಯಸ್ಥರ ಲಿಂಗವಾರು ವಿವರವನ್ನು ನೀಡಲಾಗಿದೆ. ಕುಟುಂಬದ ಮುಖ್ಯಸ್ಥರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಅಂದರೆ ಶೇ63.3 ರಷ್ಟು ಪುರುಷರಿದ್ದು, ಶೇ.36.7 ರಷ್ಟು ಮಹಿಳೆಯರಿದ್ದಾರೆ. ಈ ಕುಟುಂಬಗಳಲ್ಲಿ ಒಟ್ಟು ಜನಸಂಖ್ಯೆಯಲ್ಲಿ (248) 126 (ಶೇ.50.8) ಪುರುಷ ಮತ್ತು 122 (ಶೇ.49.2) ಮಹಿಳೆಯರಿದ್ದಾರೆ.

**ಕೋಷ್ಟಕ 3: ಕುಟುಂಬ ಮುಖ್ಯಸ್ಥರ ವೈವಾಹಿಕ ಸ್ಥಾನಮಾನ**

| ವೈವಾಹಿಕ ಸ್ಥಿತಿಗತಿ | ಆವೃತ್ತಿ | ಶೇಕಡವಾರು |
|---|---|---|
| ವಿವಾಹಿತರು | 42 | 70.0 |
| ಅವಿವಾಹಿತರು | 9 | 15.0 |
| ವಿಧವೆ/ವಿದುರ | 6 | 10.0 |
| ವಿಚ್ಛೇದಿತರು | 1 | 1.7 |
| ಪ್ರತ್ಯೇಕವಾಸ | 2 | 3.3 |
| ಒಟ್ಟು | 60 | 100.0 |

ಕೋಷ್ಟಕ 3 ರಲ್ಲಿ ಅಧ್ಯಯನಕ್ಕೊಳಪಡಿಸಿರುವ ಕುಟುಂಬಗಳ ಮುಖ್ಯಸ್ಥರ ವೈವಾಹಿಕ ಸ್ಥಾನಮಾನವನ್ನು ತೋರಿಸಲಾಗಿದೆ. ಕೋಷ್ಟಕದ ಪ್ರಕಾರ ಒಟ್ಟು ಮುಖ್ಯಸ್ಥರಲ್ಲಿ ಅತ್ಯಂತ ಹೆಚ್ಚು ಅಂದರೆ ಶೇ.70.0 ರಷ್ಟು ಮಂದಿ ವಿವಾಹಿತರಾಗಿದ್ದಾರೆ. ಇನ್ನುಳಿದಂತೆ ಶೇ.15 ರಷ್ಟು ವಿವಾಹಿತರಾಗಿದ್ದು, ಶೇ.10 ರಷ್ಟು ವಿಧವೆಯರಾಗಿದ್ದಾರೆ. ಇನ್ನುಳಿದಂತೆ ಶೇ.3.3 ರಷ್ಟು ಮಂದಿ ವಿವಿಧ ಕಾರಣಗಳಿಂದ ಪ್ರತ್ಯೇಕವಾಗಿ ವಾಸಮಾಡುತ್ತಿದ್ದಾರೆ.

**ಕೋಷ್ಟಕ 4: ಮುಖ್ಯಸ್ಥರ ವಯೋಮಾನದ ವಿವರ**

| ವಯೋಮಾನ | ಆವೃತ್ತಿ | ಶೇಕಡವಾರು |
|---|---|---|
| 18–24 | 14 | 23.3 |
| 25–44 | 26 | 43.3 |
| 45–64 | 13 | 21.7 |
| 65ಕ್ಕಿಂತ ಹೆಚ್ಚು | 7 | 11.7 |
| ಒಟ್ಟು | 60 | 100.0 |

ಕೋಷ್ಟಕ 4ರಲ್ಲಿ ಅಧ್ಯಯನಕ್ಕೊಳಪಡಿಸಿರುವ ಕುಟುಂಬಗಳ ಮುಖ್ಯಸ್ಥರ ವಿವರಗಳನ್ನು ನೀಡಲಾಗಿದೆ. ವಯೋಮಾನವಾರು ನೋಡಿದಾಗ ಅತ್ಯಂತ ಹೆಚ್ಚು ಮಂದಿ (ಶೇ.43.3) 25 ರಿಂದ 44 ವಯೋಮಾನದವರಾಗಿದ್ದಾರೆ. ಅಂದರೆ ಮಧ್ಯ ವಯಸ್ಸಿನವರ ಪ್ರಮಾಣ ಅಧಿಕವಾಗಿದೆ. ಇನ್ನುಳಿದಂತೆ ಶೇ.23.3 ರಷ್ಟು ಮಂದಿ 18–24 ವಯೋಮಾನದವರಾಗಿದ್ದು, ಶೇ 21.7 ರಷ್ಟು ಮಂದಿ 45–64 ವಯೋಮಾನದವರಾಗಿದ್ದು, ಶೇ.11.7ಮಂದಿ 65ಕ್ಕಿಂತ ಹೆಚ್ಚು ವಯೋಮಾನದವರಾಗಿದ್ದಾರೆ.

**ಕೋಷ್ಟಕ 5: ಬುಡಕಟ್ಟು ಜನರ ಶೈಕ್ಷಣಿಕ ಸ್ಥಿತಿಗತಿಗಳು**

| ಶೈಕ್ಷಣಿಕ ಸ್ಥಾನಮಾನ | ಗಂಡು | | ಹೆಣ್ಣು | | ಒಟ್ಟು | |
|---|---|---|---|---|---|---|
| | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| ಅನಕ್ಷರಸ್ಥರು | 44 | 34.9 | 52 | 42.6 | 96 | 38.7 |
| ಪ್ರಾಥಮಿಕ | 42 | 33.3 | 48 | 39.3 | 90 | 36.3 |
| ಪ್ರೌಢ | 13 | 10.3 | 10 | 8.2 | 23 | 9.3 |
| ಪಿಯುಸಿ | 11 | 8.7 | 5 | 4.1 | 16 | 6.5 |
| ಪದವಿ | 8 | 6.3 | 2 | 1.6 | 10 | 4.0 |
| ವೃತ್ತಿಪರ/ಇತರೆ | 8 | 6.3 | 5 | 4.1 | 13 | 5.2 |
| ಒಟ್ಟು | 126 | 100.0 | 122 | 100.0 | 248 | 100.0 |

ಒಂದು ಸಮುದಾಯದ ಸಾಮಾಜಿಕ–ಆರ್ಥಿಕ ಪ್ರಗತಿಗೆ ಶಿಕ್ಷಣವು ಬಹಳ ಮುಖ್ಯವಾಗಿದ್ದು, ಕೋಷ್ಟಕ 5 ರಲ್ಲಿ ಅಧ್ಯಯನಕ್ಕೊಳಪಡಿಸಿರುವ ಕುಟುಂಬದ ಸದಸ್ಯರ ಶೈಕ್ಷಣಿಕ ಸ್ಥಿತಿಯನ್ನು ನೀಡಲಾಗಿದೆ ಕೋಷ್ಟಕದ ಪ್ರಕಾರ ಅತ್ಯಂತ ಹೆಚ್ಚು ಅಂದರೆ ಶೇ 38.7.0 ರಷ್ಟು ಅನಕ್ಷರಸ್ಥರಾಗಿರುವುದು ಕಂಡು ಬಂದಿದೆ. ಅನಕ್ಷರತೆಯಿಂದಾಗಿ ಬುಡಕಟ್ಟು ಸಮುದಾಯಗಳು ಇಂದಿಗೂ ಕೂಡ ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದಿದೆ. ಈ ಕಾರಣದಿಂದ ಬಡತನ, ನಿರುದ್ಯೋಗ, ಶೋಷಣೆ, ದುಶ್ಚಟಗಳಿಗೆ ಒಳಾಗಿದ್ದಾರೆ. ತಿಳುವಳಿಕೆಯ ಕೊರೆತೆಯಿಂದಾಗಿ ತೀವ್ರತರವಾದ ಆರೋಗ್ಯ ಸಮಸ್ಯೆಗಳು ಕೂಡ ಇವರನ್ನು ಕಾಡುತ್ತಿವೆ. ಅಕ್ಷರಸ್ಥರ ಪ್ರಮಾಣವನ್ನು ಗಮನಿಸಿದಾಗ ಅತ್ಯಂತ ಅಧಿಕ ಮಂದಿ (ಶೇ.36.3) ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದು, ಶೇ.9.3 ರಷ್ಟು ಮಂದಿ ಪ್ರೌಢ ಶಿಕ್ಷಣವನ್ನು, ಶೇ.6.5 ರಷ್ಟು ಮಂದಿ ಪಿಯುಸಿ ಶಿಕ್ಷಣವನ್ನೂ ಪಡೆದಿದ್ದಾರೆ. ಆದರೆ ಕೇವಲ ಶೇ.4.0 ರಷ್ಟು ಮಂದಿ ಮಾತ್ರ ಪದವಿ ಶಿಕ್ಷಣವನ್ನು ಪಡೆದಿದ್ದು, ವೃತ್ತಿ ಶಿಕ್ಷಣವನ್ನು ಪಡೆದಿರುವವರ ಪ್ರಮಾಣ 5.2%ರಷ್ಟಿದೆ. ಆದರೆ ಇತ್ತೀಚಿನ ದಿನಗಳಲ್ಲಿ ಬುಡಕಟ್ಟು ಜನರು ತಮ್ಮ ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡುತ್ತಿದ್ದಾರೆ. ತಮ್ಮ ಮಕ್ಕಳ ತಮ್ಮಂತಾಗದೆ ಸಮಾಜದಲ್ಲಿ ಉತ್ತಮ ಬದುಕು ರೂಪಿಸಿಕೊಳ್ಳಬೇಕು ಎಂಬ ಹೆಬ್ಬಯಕೆ ಈ ಸಮುದಾಯಗಳಲ್ಲಿ ನಿಧಾನಗತಿಯಲ್ಲಿ ಏರುತ್ತಿದೆ.

ಲಿಂಗವಾರು ನೋಡಿದಾಗ ಪುರುಷ ಮತ್ತು ಮಹಿಳೆ ಎರಡೂ ವಿಭಾಗಳಲ್ಲಿಯೂ ಕೂಡ ಅನಕ್ಷರಸ್ಥರ ಪ್ರಮಾಣ ಅಧಿಕವಾಗಿದೆ. ಆದರೆ ಪುರುಷರಿಗೆ ಹೋಲಿಸಿದಾಗ ಮಹಿಳೆಯರ ಅನಕ್ಷರತೆ ಪ್ರಮಾಣ ಅಧಿಕವಾಗಿದೆ.

**ಕೋಷ್ಟಕ 6: ಅಧ್ಯಯನಕ್ಕೊಳಪಡಿಸಿರುವ ಕುಟುಂಬಗಳ ಪ್ರಮುಖ ವೃತ್ತಿ:**

| ವೃತ್ತಿಗಳು | ಗಂಡು | | ಹೆಣ್ಣು | | ಒಟ್ಟು | |
|---|---|---|---|---|---|---|
| | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು | ಆವೃತ್ತಿ | ಶೇಕಡವಾರು |
| ಕೃಷಿ | 28 | 22.2 | 14 | 11.5 | 42 | 16.9 |
| ಕೂಲಿ ಕಾರ್ಮಿಕ | 42 | 33.3 | 56 | 45.9 | 98 | 39.5 |
| ಕಿರು ಉತ್ಪನ್ನ ಸಂಗ್ರಹ | 10 | 7.9 | 18 | 14.8 | 28 | 11.3 |
| ಬುಟ್ಟಿ ನೇಯ್ಗೆ | 8 | 6.3 | 1 | 0.8 | 9 | 3.6 |
| ಸ್ವಯಂ ಉದ್ಯೋಗ | 6 | 4.8 | 2 | 1.6 | 8 | 3.2 |
| ಇತರೆ | 11 | 8.7 | 8 | 6.6 | 19 | 7.7 |
| ಮಕ್ಕಳು ಮತ್ತು ವಿದ್ಯಾರ್ಥಿಗಳು | 21 | 16.7 | 23 | 18.9 | 44 | 17.7 |
| ಒಟ್ಟು | 126 | 100.0 | 122 | 100.0 | 248 | 100.0 |

ಯಾವುದೇ ಸಮುದಾಯದ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿಯನ್ನು ತಿಳಿದುಕೊಳ್ಳುವಲ್ಲಿ ಆ ಸಮುದಾಯದವರು ನಿರ್ವಹಿಸುತ್ತಿರುವ ವೃತ್ತಿಯು ಪ್ರಮುಖ ಮಾನದಂಡವಾಗಿದೆ. ಕೋಷ್ಟಕ 6 ರಲ್ಲಿ ಅಧ್ಯಯನಕ್ಕೊಳಪಡಿಸಿರುವ ಕುಟುಂಬಗಳ ಸದಸ್ಯರ ವೃತ್ತಿ ವಿವರವನ್ನು ನೀಡಲಾಗಿದೆ. ಕೋಷ್ಟಕದ ಪ್ರಕಾರ ಅತ್ಯಂತ ಹೆಚ್ಚು ಮಂದಿ (ಶೇ.39.5) ಕೃಷಿ ಕೂಲಿ ಕಾರ್ಮಿಕರಾಗಿ ದುಡಿದು ಜೀವನ ಸಾಗಿಸುತ್ತಿದ್ದಾರೆ. ಇನ್ನುಳಿದಂತೆ ಶೇ.16.9 ರಷ್ಟು ಮಂದಿ ವ್ಯವಸಾಯ ಮಾಡುತ್ತಿದ್ದು, ಶೇ.11.3 ರಷ್ಟು ಮಂದಿ ಕಿರುಉತ್ಪನ್ನ ಸಂಗ್ರಹ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಶೇ.3.6 ರಷ್ಟು ಜನರು ಬುಟ್ಟಿ ನೇಯುವ ಕಾಯಕದಲ್ಲಿ ತೊಡಗಿದ್ದರೆ, 3.2 ರಷ್ಟು ಸ್ವಂತ ಉದ್ಯೋಗದಲ್ಲಿ ತೊಡಗಿಕೊಂಡಿದ್ದಾರೆ. ಇನ್ನುಳಿದ ಶೇ.7.7 ರಷ್ಟು ಮಂದಿ ಪ್ರಾಣಿ ಸಾಕಾಣಿಕೆ, ರೆಸಾರ್ಟ್, ಹೊಟೆಲ್, ಬೇಕರಿ, ಹಾಗೂ ಪ್ರಾವಿಷನ್ ಸ್ಟೋರ್, ಕಟ್ಟಡ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

ಲಿಂಗವಾರು ನೋಡಿದಾಗ ಪುರುಷ ಮತ್ತು ಮಹಿಳೆ ಎರಡೂ ವಿಭಾಗಗಳಲ್ಲಿಯೂ ಕೂಡ ಕೃಷಿ ಕೂಲಿ ಕಾರ್ಮಿಕರ ಪ್ರಮಾಣವೇ ಅಧಿಕವಾಗಿದೆ. ಆದರೆ ಪುರುಷರಿಗೆ ಹೋಲಿಸಿದಾಗ ಶೇ.6 ರಷ್ಟು ಹೆಚ್ಚು ಮಹಿಳೆಯರು ಕೃಷಿ ಕೂಲಿ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ.

**ಕೋಷ್ಟಕ 7: ಪ್ರತಿಕ್ರಿಯಾರ್ಥಿಗಳ ಕುಟುಂಬ ಆದಾಯ**

| ಕುಟುಂಬದ ಆದಾಯ | ಆವೃತ್ತಿ | ಶೇಕಡಾವಾರು |
|---|---|---|
| 20,000 ಕ್ಕಿಂತ ಕಡಿಮೆ | 22 | 36.7 |
| 21,000–40,000 | 28 | 46.7 |
| 41,000–60,000 | 8 | 13.3 |
| 60,000ಕ್ಕಿಂತ ಹೆಚ್ಚು | 2 | 3.3 |
| ಒಟ್ಟು | 60 | 100.0 |

ಒಂದು ಸಮುದಾಯದ ಆರ್ಥಿಕ ಪರಿಸ್ಥಿತಿಯನ್ನು ಅಳೆಯುವಲ್ಲಿ ಉದ್ಯೋಗದಷ್ಟೆ ಕುಟುಂಬದ ಆದಾಯವು ಕೂಡ ಪ್ರಮುಖ ಪಾತ್ರವಹಿಸುತ್ತದೆ. ಆದರೆ ಅಧ್ಯಯನಕ್ಕೊಳಪಡಿಸಿರುವ ಕುಟುಂಬದಲ್ಲಿ ಅತ್ಯಂತ ಹೆಚ್ಚು ಪ್ರತಿಕ್ರಿಯಾರ್ಥಿಗಳ ಕುಟುಂಬದ ಆದಾಯವು ಅಂದರೆ ಶೇ.46.7, 21,000–40,000 ರೂ ಆದಾಯವನ್ನು ಹೊಂದಿವೆ. ಶೇ.36.7 ಕುಟುಂಬಗಳು 20,000 ಕ್ಕಿಂತ ಕಡಿಮೆ ಆದಾಯವನ್ನು ಹೊಂದಿದೆ. 41,000–60,000 ರೂ ಆದಾಯ ಹೊಂದಿರುವ ಕುಟುಂಬಗಳ ಪ್ರಮಾಣ ಶೇ.13.3 ರಷ್ಟಿದ್ದರೆ, 60,000 ಕ್ಕಿಂತ ಹೆಚ್ಚು ಆದಾಯ ಹೊಂದಿರುವ ಕುಟುಂಬಗಳ ಪ್ರಮಾಣ ಕೇವಲ ಶೇ.3.3 ರಷ್ಟಿದೆ. ಮೇಲಿನ ಅಂಶಗಳನ್ನು ಗಮನಿಸಿದಾಗ ಬುಡಕಟ್ಟು ಸಮುದಾಯದ ಕುಟುಂಬಗಳು ಅತ್ಯಂತ ಕಡಿಮೆ ಆದಾಯವನ್ನು ಹೊಂದಿದ್ದು, ಜೀವನ ನಿರ್ವಹಣೆಗೆ ಕಷ್ಟಕರವಾಗಿದೆ.

**ಉಪಸಂಹಾರ**

ಒಟ್ಟಾರೆಯಾಗಿ ಹೇಳುವುದಾದರೆ ಬುಡಕಟ್ಟು ಸಮುದಾಯದವರ ಸುಸ್ಥಿರ ಅಭಿವೃದ್ಧಿಗೆ ಶಿಕ್ಷಣ ಮತ್ತು ಉದ್ಯೋಗ ಪ್ರಮುಖ ಮಾನದಂಡವಾಗಿದ್ದು, ಉತ್ತಮ ಶಿಕ್ಷಣ ಮತ್ತು ಉದ್ಯೋಗ ದೊರಕಿಸಿ ಕೊಡಲು ಸರ್ಕಾರ ಪ್ರಯತ್ನಿಸಬೇಕಿದೆ. ಶಿಕ್ಷಣ ಮತ್ತು ಉದ್ಯೋಗ ಮಾತ್ರವಲ್ಲದೆ ಸ್ಥಳೀಯ ಆರ್ಥಿಕತೆಗೆ ಅನುಗುಣವಾಗಿ ಕೌಶಲ್ಯ ಅಭಿವೃದ್ಧಿ ತರಬೇತಿ, ಆರೋಗ್ಯ ಸೌಲಭ್ಯಗಳು, ಸುಸ್ಥಿರ ಕೃಷಿ ಅಭಿವೃದ್ಧಿ, ಉದ್ಯಮಶೀಲತ ತರಬೇತಿ ನೀಡಬೇಕಿದೆ. ಇದರೊಂದಿಗೆ ಅವರು ವಾಸಿಸುವ ಹಾಡಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಕೂಡ ಪ್ರಮುಖವಾದುದಾಗಿದೆ.

**ಪರಾಮರ್ಶನ ಗ್ರಂಥಗಳು**


- Admin. (2022, May 11). *Sustainable Tribal Development - Indian Institute of Bio - Social Research and Development*. Indian Institute of Bio - Social Research and Development. https://www.ibradindia.org/sustainable-tribal-development/

- Das, B.C. (2012). Education for tribals: participation and effectiveness. New Delhi: Regal Publications.
- Edgar Thurstion. (1909). *Caste and tribes in South India-Vol. III*. Assian Publication.
- Joshi, S.D. (1980). Educational problems of the scheduled castes and scheduled tribes of Baroda district. Ph.D. unpublished thesis, M.S.U, Vadodara.
- Mishra, R. C., Sinha, D. and Berry, J.W. (1996). Ecology, acculturation and psychological adaptation: A study of Adivasis in Bihar. New Delhi: Sage.
- Sharma, V. P. R. a. K. a. S. H. (2019). SUSTAINABLE DEVELOPMENT OF TRIBAL. *Ranchiuniversity*. https://www.academia.edu/40363037/SUSTAINABLE_DEVELOPMENT_OF_TRIBAL
- Upadhyay, M. (2018). Sustainable Tribal Development: problems, Prospects, policies and cases. *ResearchGate*. https://www.researchgate.net/publication/325857396_Sustainable_Tribal_Development_Problems_Prospects_Policies_and_Cases